**ಓ.ಎಸ್. ನಂ. 474/2013**
**ಪಿ.ಡಬ್ಲ್ಯೂ-2**

**(ಇಂದು ದಿನಾಂಕಃ 05-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಬೋಧಿಸಲಾಯಿತು)**
ಮುಂದುವರೆದ ಪಾಟೀ ಸವಾಲು :ಪ್ರತಿವಾದಿ ಪರ ವಕೀಲರಿಂದಃ

ಪ್ರತಿವಾದಿ ಮನೆ ಕಟ್ಟಿರುವ ಆಸ್ತಿ ಗೌಟಾನಾ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆದೇ ರೀತಿ ಉದಗಟ್ಟಿ ಊರಲ್ಲಿ ಯಾವುದೇ ಗೌಟಾನಾ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರ ಆಸ್ತಿಯನ್ನು ಗ್ರಾಮ ಪಂಚಾಯತಿಯವರು acquire ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. VPC No.15 ಅಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ವ ಮಾಂಗನಿ ಮಾಡುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು VPC No.949(ಹಳೆ ಸಂಖ್ಯೆ518) ಪೂರ್ವ ಪಶ್ಚಿಮ 20 ಹಾಗೂ ದಕ್ಷಿಣೊತ್ತರ 30 ಆಸ್ತಿಯಲ್ಲಿ 1989 ಸಾಲಿನಿಂದ ಕಬ್ಜೆಯಲ್ಲಿ ಹಾಗೂ ಮಾಲೀಕನಾಗಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಆಸ್ತಿಯು ಉದಗಟ್ಟಿ ಗ್ರಾಮದ ಗೌಟಾನಾ ಸರ್ವೇ ನಂ.23ರ ಒಂದು ಭಾಗವಿದ್ದು ಮಂಡಳ ಪಂಚಾಯತಿ ಬೇಟಗೇರಿ ರವರು ಸದರಿ ಆಸ್ತಿಯನ್ನು ನನ್ನ ತಂದೆಗೆ ದಿಃ 02-08-1989 ರಂದು ಹಂಚಿದ್ದು ಆ ಮೇರೆಗೆ ನನ್ನ ತಂದೆಯವರ ಹೆಸರು ಪಂಚಾಯತಿ ದಾಖಲಾತಿಯಲ್ಲಿ ದಿಃ 29-06-1991 ರಂದು ಪಂಚಾಯತಿ ಠರಾವು ಸಂಖ್ಯೆ6 ರ ಪ್ರಕಾರ ದಾಖಲಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ಲಾಟನ್ನು ಹಂಚಿದಾಗ 1989 ಸಾಲಿನಲ್ಲಿ ನಾನು ಬರೆಸಿರುವ ದಾವಾ ಆಸ್ತಿಯ ಚಕಬಂದಿ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ.

ಅದೇ ರೀತಿ ಪ್ರತಿವಾದಿ ನಂ.1ರವರು ಮಾರ್ಚ ತಿಂಗಳ 2 ನೇ ವಾರ 2013 ಸಾಲಿನಲ್ಲಿ ದಾವಾ ಆಸ್ತಿಯನ್ನು ಅತಿಕ್ರಮಣ ಮಾಡಿ ದಾವಾ ಆಸ್ತಿಯಲ್ಲಿದ್ದ ನಮ್ಮ ಗುಡಿಸಲು ಮತ್ತು ತಿಪ್ಪೆಯನ್ನು ತೆಗೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಆಗ ನನ್ನ ತಂದೆಯವರು ತಕರಾರು ಮಾಡಿದ್ದು ಪ್ರತಿವಾದಿ ನಂ.1ರವರು ನನ್ನ ತಂದೆಗೆ ದಾವಾ ಆಸ್ತಿಯಿಂದ ನಮ್ಮನ್ನು ಹೊಡೆದು ಓಡಿಸಿರುತ್ತೇನೆ ಎಂದು ಜೀವ ಬೇದರಿಕೆ ಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿ ನಂ.1ರವರು ನಮ್ಮ ತಂದೆಗೆ

ಪಂಚಾಯತಿರವರು ನಮಗೆ ಹಂಚಿದ ಜಾಗೆ ಪಂಚಾಯತಿಯ ಆಸ್ತಿ ನಂ.518 (ಹಳೆಯ ನಂಬರ) ಇದನ್ನು ಪಂಚಾಯತಿದವರು ಈಗಾಗಲೇ 2003 ರಲ್ಲಿಯೇ ರದ್ದುಗೊಳಿಸಿರುವವರೆಂದು ಹೇಳಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ 8 ರಿಂದ 16 ನೇ ಖಂಡಿಕೆಯಲ್ಲಿ ಬರೆದಿರುವ ಅಂಶಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

VPC No.15 ಅಸ್ತಿಯನ್ನು 1 ನೇ ಪ್ರತಿವಾದಿ 2 ನೇ ಪ್ರತಿವಾದಿಯವರಿಂದ ಖರೀದಿಸಿ ಸದರಿ ಜಾಗೆಯಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ಪ್ರತಿವಾದಿಯವರು VPC No.518 ನೇದ್ದರಲ್ಲಿ ನಮ್ಮ ಜಾಗೆಯನ್ನು ಅತಿಕ್ರಮಣ ಮಾಡಿ ಅದನ್ನು VPC No.15 ಎಂದು ಖೊಟ್ಟಿಯಾಗಿ ಸಂಖ್ಯೆ ಕೊಟು ಖೊಟ್ಟಿ ಖರೀದಿ ಪತ್ರ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಪ್ರತಿವಾದಿಯವರು ನಮ್ಮ ಜಾಗೆಯನ್ನು ಅತಿಕ್ರಮಣ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ದಾವಾ ಆಸ್ತಿಯ ಕಬ್ಜೆಯಲ್ಲಿ ಇದ್ದ ಕಾರಣ ನನಗೆ ಯಾವುದೇ ಮಾಂಗನಿಯನ್ನು ಮಾಡುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ --ಇಲ್ಲಾ--

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೆ ಕೆ ಸರಿ ಇದೆ**

**(Smt. Surya Prabha H.D)**
**Addl. CJ & JMFC, Gokak**